# ಆದಿಲ್‌ಶಾಹಿ ಶಾಸನಗಳಲ್ಲಿ ಧಾರ್ಮಿಕ ಸಮನ್ವತೆ

## (ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು)

**Najeeyabegum N.**

najiyabegum.ik@gmail.com

**Article Link: https://aksharasurya.com/2023/07/najeeyabegum-n/**

## Abstract:

ಪ್ರಾಚೀನ ಕಾಲದಿಂದಲೂ ಭಾರತ ದೇಶವು ಹಲವು ಧರ್ಮಗಳ ಅನುಯಾಯಿಗಳನ್ನು ಸಹಸ್ರಾರು ವರ್ಷಗಳಿಂದಲೂ ಒಂದೇ ತೆಕ್ಕೆಯಲ್ಲಿ ಪೋಷಿಸುತ್ತಾ ಬಂದಿದೆ. ಅಂತೆಯೇ ಕರ್ನಾಟಕವು ಈ ವಿಷಯದಲ್ಲಿ ಬೇರೆಲ್ಲ ರಾಜ್ಯಗಳಿಗಿಂತ ಮುಂಚೂಣಿಯಲ್ಲಿದೆ. ಕ್ರಿ.ಶ. ಪೂರ್ವದಿಂದಲೂ ಕರ್ನಾಟಕವು ಹಲವಾರು ಧರ್ಮಗಳನ್ನು ಪೋಷಿಸುತ್ತಾ, ಈ ಧರ್ಮಗಳಿಗೆ ಸಂಬಂಧಿಸಿದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಲಹುತ್ತಾ-ಬೆಳಗುತ್ತಾ ಬಂದಿದೆ. ಇವುಗಳ ಅಧ್ಯಯನಕ್ಕೆ ನಮಗೆ ಅನೇಕ ಆಕರಗಳು ದೊರಕುತ್ತವೆ. ಆ ಆಕರಗಳಲ್ಲಿ ಶಾಸನ ಆಕರಗಳಿಗೆ ಬಹಳ ಮಹತ್ವವಿದೆ. ಶಾಸನಗಳಲ್ಲಿ ಕನ್ನಡ-ಸಂಸ್ಕೃತ ಶಾಸನಗಳಂತೆಯೇ ಆದಿಲ್‌ಷಾಹಿ ಸಾಮ್ರಾಜ್ಯದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳೂ ಸಹ ನಮ್ಮಲ್ಲಿ ನೂರಾರು ದೊರಕುತ್ತವೆ. ಶಾಸನ ಸಂಖ್ಯೆ 220 ಚಿಕ್ಕಮಗಳೂರು ಜಿಲ್ಲೆಯ ಬಾಬಾ ಬುಡೆನ್‌ಗಿರಿಯಲ್ಲಿ ದೊರಕಿದ್ದು, ಹಿಜಿರಿ ವರ್ಷ 396 (ಕ್ರಿ.ಶ.1005)ನ್ನು ಹೊಂದಿದೆ. ದಾದಾ ಹಯಾತ್ ಮೀರ್‌ಖಲಂದರ್ (ಶೇಕ್‌ಅಬ್ದುಲ್ ಅಜೀಜ್) ಅವರು ಈ ಬೆಟ್ಟಕ್ಕೆ ಬಂದು ನೆಲಸಿದ್ದ ಬಗೆಗಿನ ವಿವರಗಳನ್ನೊಳಗೊಂಡ ಮೂಲ ಶಾಸನ ಅಥವಾ ಲಿಖಿತ ದಾಖಲೆಯನ್ನಾಧರಿಸಿದ ಮೌಖಿಕ ಮಾಹಿತಿಯನ್ನು ಈ ಶಾಸನದಲ್ಲಿ ದಾಖಲಿಸಿದಂತಿದೆ. ದಾದಾ ಹಯಾತ್ ಮೀರ್‌ಖಲಂದರ್ ಈ ಸ್ಥಳಕ್ಕೆ ಬಂದು ನೆಲಸಿದ್ದ ಕಾರಣದಿಂದ ಈ ಬೆಟ್ಟಕ್ಕೆ ಬಾಬಾ ಬುಡೆನ್‌ಗಿರಿಯೆಂದು ಹೆಸರಿಸಲಾಗಿದೆ. ದಾದಾ ಹಯಾತ್ ಮೀರ್‌ಖಲಂದರ್ ಇಲ್ಲಿಗೆ ಬಂದು ಧ್ಯಾನಮಗ್ನನಾಗಿ ಕಾಲ ಕಳೆದ ಸಮಯಕ್ಕೆ ಮೊದಲು, ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಮುಸಲ್ಮಾನರ ಆಳ್ವಿಕೆಯು ಆರಂಭವಾಗಿರಲಿಲ್ಲವೆಂಬುದು ಗಮನಾರ್ಹ ವಿಷಯವಾಗಿದೆ.[1] ಕರ್ನಾಟಕದ ಮೊದಲ ಸೂಫಿ ಸಂತರ ಪರ್ಶಿಯನ್ ಶಾಸನ ಇದಾಗಿದ್ದು ಈ ಸ್ಥಳಕ್ಕೆ ಇಂದಿಗೂ ಸಹ ಸಾವಿರಾರು ಹಿಂದೂ-ಮುಸಲ್ಮಾನರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇದರಂತೆ ಆದಿಲ್‌ಷಾಹಿ ಅವರ ಆಳ್ವಿಕೆ ಕಾಲದಲ್ಲಿ ರಚಿತವಾದ ಶಾಸನಗಳು, ಧರ್ಮ ಸಮನ್ವಯತೆಗೆ ಸಂಬಂಧಿಸಿದಂತೆ ಹಲವಾರು

ಶಾಸನಗಳು ನಮಗೆ ಚರಿತ್ರೆಯಲ್ಲಿ ದೊರಕುತ್ತವೆ. ಈ ಲೇಖನಕ್ಕೆ ಸಂಬಂಧಿಸಿದಂತೆ ಇದೂವರೆಗೂ ಪ್ರಕಟಿತವಾದ 7 ಶಾಸನಗಳು ದೊರೆತಿವೆ.

**Key words:** ಕರ್ನಾಟಕ, ಪರ್ಶಿಯನ್, ಅರೇಬಿಕ್ ಮತ್ತುಉರ್ದು ಶಾಸನಗಳು.

**ಪೀಠಿಕೆ :**

ಕ್ರಿ.ಶ.1489 ರಲ್ಲಿ ಯೂಸುಫ್ ಆದಿಲ್‌ಖಾನ್‌ನು ಆದಿಲ್‌ಶಾಹಿ ಸಾಮ್ರಾಜ್ಯವನ್ನು ದಖ್ಖನ್ ಭಾರತದ ಬಿಜಾಪುರದಲ್ಲಿ ಸ್ವತಂತ್ರವಾದ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದನು. ಒಟ್ಟು 9 ಅರಸರು ಆದ ಯೂಸುಫ್ ಆದಿಲ್‌ಖಾನ್ (ಕ್ರಿ.ಶ.1489–ಕ್ರಿ.ಶ.1510), ಇಸ್ಮಾಯಿಲ್ ಆದಿಲ್‌ಖಾನ್ (ಕ್ರಿ.ಶ.1510–ಕ್ರಿ.ಶ.1534), ಮಲ್ಲುಖಾನ್ (ಕ್ರಿ.ಶ.1534–ಕ್ರಿ.ಶ.1535), ಒಂದನೇ ಇಬ್ರಾಹಿಂ ಆದಿಲ್‌ಶಾಹ (ಕ್ರಿ.ಶ.1535–ಕ್ರಿ.ಶ.1557), ಒಂದನೇ ಅಲಿ ಆದಿಲ್‌ಶಾಹ (ಕ್ರಿ.ಶ.1557–ಕ್ರಿ.ಶ.1580), ಎರಡನೇ ಇಬ್ರಾಹಿಂ ಆದಿಲ್‌ಶಾಹ (ಕ್ರಿ.ಶ.1580–ಕ್ರಿ.ಶ.1626), ಮಹಮ್ಮದ್ ಆದಿಲ್‌ಶಾಹ (ಕ್ರಿ.ಶ.1626–ಕ್ರಿ.ಶ.1658), ಎರಡನೇ ಅಲಿ ಆದಿಲ್‌ಶಾಹ (ಕ್ರಿ.ಶ.1656–ಕ್ರಿ.ಶ.1672), ಸಿಕಂದರ್ ಆದಿಲ್‌ಶಾಹ (ಕ್ರಿ.ಶ.1672–ಕ್ರಿ.ಶ.1686) ಇದರಂತೆ ಕ್ರಮವಾಗಿ ಇವರು ತಮ್ಮ ಆದಿಲ್‌ಶಾಹಿ ಸಮ್ರಾಜ್ಯವನ್ನು 200 ವರ್ಷಗಳವರೆಗೆ ರಾಜ್ಯಭಾರ ನಡೆಸಿದರು.

'ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಷಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ 1489–1686ರವರೆಗೆ ರಾಜ್ಯ ಭಾರ ಮಾಡಿದ ಮನೆತನವಿದು. 'ದೀನ್–ಎ–ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕ್ಬರ್‌ನಂತೆ 'ದಾದ–ಎ–ಇಲಾಹಿ' ಖ್ಯಾತಿಯ ಆದಿಲ್‌ಷಾಹಿ ಮನೆತನದ ಜಗದ್ಗುರು 2ನೆಯ ಇಬ್ರಾಹಿಂ ಬಾದಷಾಹನು ಸಮನ್ವಯ ಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ. ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯ ಪ್ರೇಮಿಗಳು. ಇವರ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ'.[2] ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲ್‌ಷಾಹಿಗಳ ಪಾತ್ರ ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು

ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲ್‌ಷಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ'.[3] ಕ್ರಿ.ಶ. 1347ರಿಂದ ಕ್ರಿ.ಶ. 1947ರ ವರೆಗೆ ಸುಮಾರು ಆರು ನೂರು ವರುಷಗಳವರೆಗೆ ಮುಸ್ಲಿಮರು ಕರ್ನಾಟಕದ ಬಹು ಭಾಗವನ್ನು ಆಳಿದ್ದಾರೆ. ಅದಕ್ಕೂ ಮೊದಲೆಯೇ ಖಿಲ್ಜಿಗಳು, ತುಘಲಕ್ ಮನೆತನಗಳು ಇಲ್ಲಿಗೆ ಬಂದು ಹೋಗಿದ್ದಾರೆ. ಅವರೆಲ್ಲ ನಾಡಿನ ತುಂಬ ತಮ್ಮ ಕಾರ್ಯಗಳನ್ನು ಶಾಸನ ರೂಪದಲ್ಲಿ ರಚಿಸಿರುವುದನ್ನು ಈ ಶಾಸನಗಳಲ್ಲಿ ಅಧ್ಯಯನ ಮಾಡಬಹುದಾಗಿದೆ.

**1. ಶಾಸನ ಸಂಖ್ಯೆ–111**

**ಶಾಸನ ಸ್ಥಳ:** ಬಿಜಾಪುರ್

**ಪ್ರಕಟಣೆ:** EIAPS 1955 – 56/P.28

**ಭಾಷೆ:** ಪರ್ಶಿಯನ್

**ಅರಸ:** ಯೂಸುಫ್ ಆದಿಲ್‌ಖಾನ್

**ಸಾಮಂತ:** ?

**ಬರಹಗಾರ:** ಕಾಜಿ–ಇ–ಖಾಸ್ ಯಾಸೀನ್

**ಶಾಸನ ವರ್ಷ:** ಕ್ರಿ.ಶ.1500

ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನವು 7 ಸಾಲಿನಲ್ಲಿ ಬರೆಯಲ್ಪಟ್ಟಿದೆ. ಇದು ಒಂದು ಕೌಲ್‌ನಾಮ ಎಂದರೆ ಗೇಣಿ ಪತ್ರವಾಗಿದೆ. ಇದು ಖುದಾವಂದಖಾನ್–ಇ–ಆಜಮ್ ಅವರದು. ಇದರಲ್ಲಿ ಮುಹಮ್ಮದಾಬಾದ್ ಹಾಗೂ ತಾಳೀಕೋಟೆಯ ನಿವಾಸಿಗಳಿಗೆ ನಿರೂಪ ತಿಳಿಸಲಾಗಿದೆ. ಈ ಕೌಲ್ ಕರಾರುಗಳನ್ನು (ಗೇಣಿ ನಿಯಮಗಳನ್ನು) ಈ ನಿವಾಸಿಗಳು ಮುರಿಯಬಾರದು. ಯಾರಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಅವರು ಮುಸಲ್ಮಾನರಾದರೆ ದೇವರಿಗೂ, ಮೊಹ್ಮದನಿಗೂ ಮತ್ತು ಅಲೀಗೂ ಹೊರಗೆ. ಹಿಂದೂಗಳಾದರೆ ಅವರ ಧರ್ಮಕ್ಕೆ ಹೊರಗು. ಶಾಸನವು ಷುಹುರ್ 901 ಮೊಹರ್‍ರಂ, 12 ಎಂದರೆ ಕ್ರಿ.ಶ. 1500 ತೇದಿಯನ್ನು ಹೊಂದಿದೆ. ಕಾಜಿ–ಇ–ಖಾಸ್ ಯಾಸೀನ್ ಸ್ವಹಸ್ತದಿಂದ ಬರೆದಿದ್ದಾನೆ.[4] ಎಂಬುವುದನ್ನು ಈ ಶಾಸನ ತಿಳಿಸುತ್ತದೆ. ಹಾಗೂ ಯೂಸುಫ್ ಆದಿಲ್‌ಖಾನ್‌ನ ಆಡಳಿತಾವಧಿಯಲ್ಲಿ ರಚನೆಯಾದ ಈ ಶಾಸನದ ಬರಹಗಾರನ ಹೆಸರು ಉಲ್ಲೇಖವಾಗಿದ್ದು ಸಾಮಂತನ ಹೆಸರು ಉಲ್ಲೇಖವಾಗಿಲ್ಲ.

**2. ಶಾಸನ ಸಂಖ್ಯೆ–114**

**ಶಾಸನ ಸ್ಥಳ:** ಬಿಜಾಪುರ್

**ಪ್ರಕಟಣೆ:** EIAPS 1955 – 56/P.75

**ಭಾಷೆ:** ಪರ್ಶಿಯನ್ ಮತ್ತುಅರೇಬಿಕ್

**ಅರಸ:** ಒಂದನೇಇಬ್ರಾಹಿಂ ಆದಿಲ್‌ಷಾಹ

**ಸಾಮಂತ:** ?

**ಬರಹಗಾರ:** ?

**ಶಾಸನ ವರ್ಷ:** ಕ್ರಿ.ಶ. 1535

ಪರ್ಶಿಯನ್ ಮತ್ತು ಅರೇಬಿಕ್ ಭಾಷೆಯಲ್ಲಿ ರಚಿತವಾದ ಈ ಶಾಸನವು ಒಟ್ಟು 5 ಸಾಲಿನಲ್ಲಿ ಬರೆಯಲಾಗಿದೆ. ಈ ಶಾಸನವು ಬಿಜಾಪುರದ ಮಲಿಕ್ ಸಂದಲ್ ಮಸೀದೆಯ ಹಿಂಬದಿಯ ಚಿಲ್ಲಾ ಬಾಲೆ ಸಾಹೇಬ್ ಕಟ್ಟೆಯಲ್ಲಿ ದೊರಕಿದೆ. ಮಸೀದೆಗೆ ಎರಡು ತೋಟಗಳನ್ನು ಮತ್ತು ಎರಡು ಚಾವರ ಭೂಮಿಯನ್ನು ದಾನದತ್ತಿಯಾಗಿತ್ತುದು, ಈ ಶಾಸನದ ವಿಷಯ. ಈ ದಾನದತ್ತಿಯನ್ನು ಅಪಹರಿಸಿದವರು ದೇವರ ಶಾಪಕ್ಕೆ ಒಳಗಾಗುತ್ತಾರೆ ಎಂದು ಹೇಳಲಾಗಿದೆ. ಈ ಶಾಸನವನ್ನು ಷುಹೂ 941, ರಜಬ್ ಎಂದರೆ ಕ್ರಿ.ಶ. 1535 ರಲ್ಲಿ ಬರೆಯಲಾಗಿದೆ.[5] ಈ ಶಾಪಾಶಯ ಶಾಸನ ಎಲ್ಲಾ ಧರ್ಮದವರಿಗೂ ಅನ್ವಯಿಸುತ್ತದೆ ಎಂದು ಹೇಳಬಹುದಾಗಿದೆ. ಒಂದನೇ ಇಬ್ರಾಹಿಂ ಆದಿಲ್‌ಷಾಹನ ಕಾಲಾವಧಿಯಲ್ಲಿ ರಚಿತವಾದ ಈ ಶಾಸನ ವಿಷಯದಲ್ಲಿ ಸಾಮಂತ ಹಾಗೂ ಬರಹಗಾರನ ಹೆಸರು ಉಲ್ಲೇಖವಾಗಿಲ್ಲ.

**3. ಶಾಸನ ಸಂಖ್ಯೆ– 124**

**ಶಾಸನ ಸ್ಥಳ:** ಬಿಜಾಪುರ್

**ಪ್ರಕಟಣೆ:** Memoir-49

**ಭಾಷೆ:** ಪರ್ಶಿಯನ್

**ಅರಸ:** ಒಂದನೆ ಅಲಿ ಆದಿಲ್‌ಷಾಹ

**ಸಾಮಂತ:** ಜಗದಿರ್‌ರಾವ್‌ನ ಪುತ್ರಜಗತ್‌ರಾವ್

**ಬರಹಗಾರ:** ?

**ಶಾಸನ ವರ್ಷ:** ಕ್ರಿ.ಶ.1561 ಸೆಪ್ಟಂಬರ್11

ಈ ಪರ್ಶಿಯನ್ ಶಾಸನವು 3 ಸಾಲಿನಲ್ಲಿ ರಚಿತವಾಗಿದೆ. ಅಲ್ಲಾಪುರ ಬಾಗಿಲು ಬಳಿಯಲ್ಲಿರುವ ತಬೂತ್ ಬುರ್ಜಿನಲ್ಲಿ ದೊರೆತಿದೆ. ಈ ಕೋಟೆಗೋಡೆಯ (ಈ

ಭಾಗದ) ನಿರ್ಮಾಣವನ್ನು ಕುರಿತಿದೆ. ಷಾಃ ಅಲೀ ಆದಿಲ್ ಷಾಃ ದೊರೆಯ ಆಳ್ವಿಕೆಯಲ್ಲಿ ಜಗದಿರಾವ್(?) ಪುತ್ರಜಗತ್‌ರಾವ್ ಎಂಬುವನು ಆ.ಹಿ. 969 ಮುಹರ್ರಂ 1 ಕ್ರಿ.ಶ. 1561 ಸೆಪ್ಟೆಂಬರ್ 11 ರಂದು ಈ ನಿರ್ಮಾಣ ಕಾರ್ಯವನ್ನು ಸಂಪೂರ್ಣಗೊಳಿಸಿದನೆಂದು ಇದು ವಿವರಿಸಿದೆ.[6]

ಒಂದನೆ ಅಲಿ ಆದಿಲ್‌ಷಾಹನ ಆಡಳಿತಾವಧಿಯಲ್ಲಿ ರಚನೆಯಾದ ಈ ಶಾಸನದಲ್ಲಿ ಸಾಮಂತನ ಹೆಸರು ಜಗದಿರಾವ್‌ನ ಪುತ್ರ ಜಗತ್‌ರಾವ್ ಎಂದು ಉಲ್ಲೇಖವಾಗಿದ್ದು, ಆದರೆ ಶಾಸನ ಬರಹಗಾರನ ಹೆಸರು ಉಲ್ಲೇಖವಾಗಿಲ್ಲ ಎಂಬುದನ್ನು ಕಾಣಬಹುದಾಗಿದೆ. ಹೆಸರಿನ ಮೂಲಕ ಜಗದಿರಾವ್ ಮತ್ತು ಜಗತ್‌ರಾವ್ ಇವರು ಹಿಂದೂಗಳಾಗಿದ್ದು, ಈ ಮೊದಲೇ ತಂದೆ ಜಗದಿರಾವ್ ಆದಿಲ್‌ಷಾಹಿ ಅವರ ಆಸ್ಥಾನದಲ್ಲಿದ್ದ ಅವನ ನಂತರ ಅವನ ಮಗನು ಸಹ ಅಲ್ಲಿಯೇ ಸೇವಕನಾಗಿದ್ದು ಅವನ ಮುಖಾಂತರ ಕೋಟೆಯ ಗೋಡೆ ನಿರ್ಮಾಣ ಮಾಡಲಾಗಿದೆ ಎಂದು ಶಾಸನದಲ್ಲಿ ತಿಳಿದುಕೊಳ್ಳಲಾಗುವುದು.

## 4. ಶಾಸನ ಸಂಖ್ಯೆ–128

**ಶಾಸನ ಸ್ಥಳ:** ಬಿಜಾಪುರ್
**ಪ್ರಕಟಣೆ:** Memoir-49
**ಭಾಷೆ:** ಪರ್ಶಿಯನ್
**ಅರಸ:** ಒಂದನೆ ಅಲಿ ಆದಿಲ್‌ಷಾಹ
**ಸಾಮಂತ:** ಪಂಡಿತ್ ನಂದಜಿ
**ಬರಹಗಾರ:** ?
**ಶಾಸನ ವರ್ಷ:** ಕ್ರಿ.ಶ. 1568–69

ಒಂದೇ ಸಾಲಿನಲ್ಲಿ ಬರೆಯಲ್ಪಟ್ಟ ಈ ಶಾಸನದ ಭಾಷೆಯು ಪರ್ಶಿಯನ್ ಆಗಿದೆ. ಇದು ಲಂಡಾಕಸ್ಸಾಬ್ ಬುರ್ಜಿನ ಹಿತ್ತಿಲ ಬಾಗಿಲಲ್ಲಿ ದೊರೆತಿದೆ. ಇದು ಷುಹೂರ್ ವರ್ಷ 966 (ಮತ್ತು ಆ.ಹಿ.976) ಎಂದರೆ ಕ್ರಿ.ಶ. 1568–69 ಎಂಬ ತೇದಿಗಳನ್ನು ಹೊಂದಿದ್ದು, ಹಿತ್ತಿಲ ಬಾಗಿಲನ್ನು ಆಲೀ ಆದಿಲ್‌ಷಾಃ ರಾಜನ ಆಳ್ವಿಕೆಯಲ್ಲಿ ಪಂಡಿತ್ ನಂದಜಿ ಮಾಡಿಸಿದನೆಂದು ದಾಖಲಿಸಿದೆ.[7]

ಒಂದನೆ ಅಲಿ ಆದಿಲ್‌ಷಾಹನ ಅಧಿಕಾರಾಧಿಯಲ್ಲಿ ರಚಿತವಾದ ಈ ಶಾಸನ ವಿಷಯದಲ್ಲಿ ಸಾಮಂತ ಪಂಡಿತ್ ನಂದಜಿ ಅವರ ಹೆಸರು ದಾಖಲಾಗಿದ್ದು, ಶಾಸನ ಬರಹಗಾರನ ಹೆಸರು ದಾಖಲಾಗಿಲ್ಲ. ಈ ಶಾಸನದಿಂದ ತಿಳಿಯುವುದನೆಂದರೆ

ಹಿಂದೂ ವ್ಯಕ್ತಿಯನ್ನು ತಮ್ಮ ಆಸ್ಥಾನದಲ್ಲಿ ಸೇವಕರಾಗಿದ್ದರು ಹಾಗೂ ಮುಸ್ಲಿಂ ಸೇವಕರಂತೆ ಇವರಿಗೂ ಕಟ್ಟಡಗಳನ್ನು ಕಟ್ಟಿಸಿ ಅವರ ಹೆಸರನ್ನು ಶಾಸನದ ಮೇಲೆ ಉಲ್ಲೇಖಿಸಿರುವುದು ಧರ್ಮ–ಸಮನ್ವಯತೆಗೆ ಈ ಶಾಸನ ಉದಾಹರಣೆಯಾಗಿದೆ.

**5. ಶಾಸನ ಸಂಖ್ಯೆ–271**

**ಶಾಸನ ಸ್ಥಳ:** ಗುಲ್ಬರ್ಗಾ
**ಪ್ರಕಟಣೆ:** EIM 1939–40/P.19
**ಭಾಷೆ:** ಪರ್ಶಿಯನ್
**ಅರಸ:** ಎರಡನೆ ಇಬ್ರಾಹಿಂ ಆದಿಲ್‌ಷಾಹ
**ಸಾಮಂತ:** ನಾಯಿಬ್ ಮಲಿಕ್‌ಯಾಕುತ್, ಮಲಿಕ್‌ರಿಹಾನ್
**ಬರಹಗಾರ:** ?
**ಶಾಸನ ವರ್ಷ:** ಕ್ರಿ.ಶ.1609–10

ಪದ್ಯದ ರೂಪದಲ್ಲಿರುವ ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದ್ದು ಒಟ್ಟು 10 ಸಾಲಿನಲ್ಲಿ ಬರೆಯಲ್ಪಟ್ಟಿದೆ. ಎರಡನೆ ಇಬ್ರಾಹಿಂ ಆದಿಲ್‌ಷಾಹನ ಆಡಳಿತಾವಧಿಯಲ್ಲಿ ರಚಿಸಲ್ಪಟ್ಟು ಈ ಶಾಸನದಲ್ಲಿ ನಾಯಿಬ್ ಮಲಿಕ್‌ಯಾಕುತ್ ಹಾಗೂ ಮಲಿಕ್‌ರಿಹಾನ್ ಎಂದು ಎರಡು ಸಾಮಂತರ ಹೆಸರು ಉಲ್ಲೇಖವಾಗಿದ್ದು ಶಾಸನ ಬರಹಗಾರನ ಹೆಸರು ಉಲ್ಲೇಖವಾಗಿಲ್ಲ. ಈ ಶಾಸನವು ಮೂಲತಃ ನಯಬತ್ ಬುರ್‌ಜಿಗೆ ಸಂಭಂಧಿಸಿದ್ದು, ಈ ಬುರ್ಜನ ಇನ್ನೊಂದು ಹೆಸರು 'ಹನುಮಾನ್ ಬುರ್ಜ' ಎಂದಿದೆ. ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನಕ್ಕೆ ಹನುಮಾನ್ ಎಂದು ಹಿಂದೂ ದೇವರ ಹೆಸರಿರುವುದರ ಮೂಲಕ ಧರ್ಮಸಮನ್ವಯತೆಯನ್ನು ಕಾಣಬಹುದಾಗಿದೆ. ಈ ಶಾಸನವನ್ನು ಗುಲ್ಬರ್ಗಾದ ಸಾರ್ವಜನಿಕೋದ್ಯಾನದಲ್ಲಿಂದ ಹೈದರಾಬಾದ್ ವಸ್ತು ಸಂಗ್ರಹಾಲಯಕ್ಕೆ ಒಯ್ಯಲಾಗಿದೆ. ಈ ಶಾಸನದಲ್ಲಿ ಎರಡು ಸಾಮಂತರ ಹೆಸರನ್ನು ಉಲ್ಲೇಖಿಸಲಾಗಿದೆ ಬುರ್ಜನ್ನು ನಾಯಿಬ್ ಮಲಿಕ್‌ಯಾಕುತ್ ಎಂಬ ಅಧಿಕಾರಿಯು ತನ್ನ ಸಹಾಯಕ ಸಾಮಂತ ಮಲಿಕ್‌ರಿಹಾನನ ಸಹಾಯದಿಂದ ಕಟ್ಟಿಸಿದನೆಂದು ಇದು ತಿಳಿಸುತ್ತದೆ. ಈ ಕಾರ್ಯವು ಇಬ್ರಾಹಿಂ ಆದಿಲ್ ಷಾಃ ದೊರೆಯ ಕಾಲಕ್ಕೆ ಆ.ಹಿ. 1018 ಎಂದರೆ ಕ್ರಿ.ಶ. 1609–10ರಲ್ಲಿ ಸಂಪೂರ್ಣವಾಯಿತು.

**6. ಶಾಸನ ಸಂಖ್ಯೆ–164**

**ಶಾಸನ ಸ್ಥಳ:** ಬಿಜಾಪುರ್

**ಪ್ರಕಟಣೆ:** WMB || P.102
**ಭಾಷೆ:** ಪರ್ಶಿಯನ್ ಮತ್ತು ಮರಾಠಿ
**ಅರಸ:** ಮೊಹ್ಮದ್ ಆದಿಲ್‌ಷಾಹಿ
**ಸಾಮಂತ:** ಅಫ್ಜಲ್‌ಖಾನ್
**ಬರಹಗಾರ:** ?
**ಶಾಸನ ವರ್ಷ:** ಕ್ರಿ.ಶ. 1652, ನವೆಂಬರ್ 22.

ಪರ್ಶಿಯನ್ ಮತ್ತು ಮರಾಠಿ ಭಾಷೆಯಲ್ಲಿರುವ ಈ ಶಾಸನ ಪರ್ಶಿಯನ್ ಭಾಷೆಯ 12 ಸಾಲಿನಲ್ಲಿ ರಚಿಸಲ್ಪಟ್ಟಿದೆ. ಮೊಹಮ್ಮದ್ ಆದಿಲ್‌ಷಾಹಿ ಅರಸನ ಕಾಲಾಧಿಯಲ್ಲಿ ರಚನೆಯಾದ ಈ ಶಾಸನದಲ್ಲಿ ಸಾಮಂತನ ಹೆಸರು ಉಲ್ಲೇಖವಾಗಿದ್ದು ಬರಹಗಾರನ ಹೆಸರು ಉಲ್ಲೇಖವಾಗಿಲ್ಲ. ಈ ಶಾಸನ ಖ್ವಾಜಾ ಅಮೀನ್ ದರ್ಗಾದಲ್ಲಿ ದ್ವಾರದ ಮೇಲಿದೆ. ಇದೊಂದು ರಾಜಾಜ್ಞೆ, ಇದನ್ನು ಮುಖ್ಯ ಸೇನಾಧಿಪತಿ (ಸಿಪಾಃ ಸಾಲಾರ್), ದಖ್ಖನ್ನಿನ ಕುಲೀನರ ಮುಖ್ಯಸ್ಥ ಅಫ್ಜಲ್‌ಖಾನ್ ಮೊಹಮ್ಮದ್ ಷಾಹಿಯ ವಿನಂತಿ ಮೇರೆಗೆ ಹೊರಡಿಸಲಾಗಿದೆ. ಈ ಆಜ್ಞೆಯ ಪ್ರಕಾರ ಇನ್ನು ಮುಂದೆ ಹೀಗೆ ನಡೆದುಕೊಳ್ಳಬೇಕು: ಇದು ವರೆಗಿನಂತೆ ವಾರಸುದಾರರಿಲ್ಲದ ಹಿಂದೂ ರತ್ನ ವ್ಯಾಪಾರಿಗಳ ಹಾಗೂ ಇತರ ಹಿಂದೂ ಸಮುದಾಯದ ಜನರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ರಾಜ್ಯದ ಬೊಕ್ಕಸಕ್ಕೆ ಸೇರಿಸಿಕೊಳ್ಳದೆ, ವಾರಸುದಾರರಿಲ್ಲದ ಎಲ್ಲಾ ಜಾತಿಯ ರತ್ನ ವ್ಯಾಪಾರಿಗಳ ಆಸ್ತಿಪಾಸ್ತಿಗಳನ್ನು ಅವರ ಸಂಬಂಧಿಕರಿಗೆ, ಕುಲಬಾಂಧವರಿಗೆ ಕೊಡಬೇಕು, ಇಲ್ಲದಿದ್ದರೆ ಆತನಿಗೆ ಪುಣ್ಯವಾಗಲಿಯೆಂದು ದಾನಮಾಡಿ ಬಿಡಬೇಕು. ಈ ಆಜ್ಞೆಯನ್ನು ಸುಲ್ತಾನ್ ಮೊಹಮ್ಮದ್ ಬಾದ ಷಾಃ ಅವರ ಆಳ್ವಿಕೆಯಲ್ಲಿ ಬರೆಯಲಾಯಿತು. ಇದರಲ್ಲಿ ಆ.ಹಿ. 1063, ಮೊಹರ್ರಂ 1 ಎಂದರೆ ಕ್ರಿ.ಶ. 1652, ನವೆಂಬರ್ 22 ಎಂಬ ತೇದಿ ಇದೆ.[8] ಈ ಶಾಸನದ ವಿಷಯವು ಎಲ್ಲಾ ಜಾತಿಯ ಕುಲ ಭಾಂಧವರಿಗು ಅನ್ವಯಿಸುವಂತೆ ರಾಜನು ಶಾಸನ ರಾಜಾಜ್ಞೆಯನ್ನು ಹೊರಡಿಸಿ ತನ್ನ ಸಾಮ್ರಾಜ್ಯದಲ್ಲಿ ಏಕಾತಭಾವವನ್ನು ಅನುಸರಿಸಿಕೊಂಡು ಆಳ್ವಿಕೆ ನಡೆಸಿದ್ದನ್ನು ಶಾಸನದಲ್ಲಿ ಕಾಣಬಹುದಾಗಿದೆ. ಈ ದರ್ಗಾ ಆದಿಲ್‌ಶಾಹಿ ವಾಸ್ತು ಕಲೆಯಲ್ಲಿ ಮಹತ್ವದಾಗಿದೆ. ಎಲ್ಲ ಕಡೆ ಗುಮ್ಮಟ, ಕಟ್ಟಡದ ಮಧ್ಯದಲ್ಲಿ ದೊಡ್ಡದಾದ ಗುಮ್ಮಟವಿದ್ದು ದಖ್ಖನ್ನಿನ ವಾಸ್ತು ಕಲೆಯಲ್ಲಿ ತನ್ನದೆ ಆದ ಚಾಪನ್ನು ಮೂಡಿಸಿದೆ.

**7. ಶಾಸನ ಸಂಖ್ಯೆ– 202**

**ಶಾಸನ ಸ್ಥಳ:** ಬಿಜಾಪುರ್

**ಪ್ರಕಟಣೆ:** Memoir-P.85

**ಭಾಷೆ:** ಪರ್ಶಿಯನ್

**ಅರಸ:** ಮಹಮ್ಮದ್ ಆದಿಲ್‌ಷಾಹ

**ಸಾಮಂತ:** ?

**ಬರಹಗಾರ:** ?

**ಶಾಸನ ವರ್ಷ:** ಕ್ರಿ.ಶ. 1656

ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನವು ಒಟ್ಟು 13 ಸಾಲಿನಲ್ಲಿ ರಚಿತವಾಗಿದೆ. ಮಹಮ್ಮದ್ ಆದಿಲ್‌ಷಾಹನ ಆಡಳಿತಾವಧಿಯಲ್ಲಿ ರಚನೆಯಾದ ಈ ಶಾಸನದಲ್ಲಿ ಸಾಮಂತ ಮತ್ತು ಬರಹಗಾರನ ಹೆಸರನ್ನು ದಾಖಲಿಸಿಲ್ಲ. ಈ ಶಾಸನವು ಬಿಜಾಪುರ್ ವಸ್ತು ಸಂಗ್ರಹಾಲಯದಲ್ಲಿದೆ. ಇದೊಂದು ಸರ್ಕಾರೀ ದಾಖಲೆ ಮತ್ತು ರಾಜಾಜ್ಞೆ, ಇದನ್ನು ಸಹಾಯಕ ಆಡಳಿತಾಧಿಕಾರಿಗಳ (ನಾಯಿಬ್–ಇ–ಘೈಬತ್) ಗಮನಕ್ಕೋಸ್ಕರ ಜಾರಿಮಾಡಲಾಗಿದೆ. ಈ ಆಜ್ಞೆಯನ್ನು ಮೊಹಮ್ಮದ್ ಅಲೀ ಹಜ್ಜಾಮ್‌ನ ವಿನಂತಿಯ ಮೇರೆಗೆ ನವಾಬರು ಕಾರ್ಯಚರಣೆಗೆ ತಂದರು. ಬಡವರಾದ ಹಜಾಮ ಸಮಾಜದ ಮೇಲೆ ಗುಲ್‌ಮೇವಾ ಬರಾದ (ಬರಾತ್=ಮದುವೆ, ಮದುವೆ ಮೆರವಣಿಗೆ) ಮುಂತಾಗಿ ನ್ಯಾಯಬಾಹಿರ ಕರಗಳನ್ನು (ಬಿಜಾಪುರ) ಮಾಮ್ಲಾದಲ್ಲಿ ಹೇರಬಾರದು. ಬೀದರ್ ಹಾಗೂ ಖುರಾಸಾನ್ (=ಇರಾನ್) ವಿಭಾಗಗಳಲ್ಲಿ ಕರವನ್ನು ಕಸಬುದಾರರ ಮೇಲೆ ಹಾಕುವಂತೆ ಹಾಗೆ ಇಲ್ಲಿನ ಹಜಾಮ ಸಮಾಜದ ಮೇಲೆ ಹಾಕಬಾರದು ಎಂಬ ಆಜ್ಞೆಯನ್ನು ಹೊರಡಿಸಿ, ಘನತೆವೆತ್ತ ಮಹಾಪ್ರಭು ನವಾಬರು ಹಜಾಮ್ ಸಮಾಜವನ್ನು ಈ ತೆರಿಗೆಗಳಿಂದ ಮುಕ್ತಮಾಡಿದರು. ರಕ್ಷಣಾ ಸಂಬಂಧಿ ತೆರಿಗೆಗಳಿಂದಲೂ ಮುಕ್ತರನ್ನಾಗಿಸಿದರು[9] ಎಂಬುದನ್ನು ಶಾಸನದಲ್ಲಿ ಹೇಳಲಾಗಿದೆ.

**8. ಶಾಸನ ಸಂಖ್ಯೆ– 412**

**ಶಾಸನ ಸ್ಥಳ:** ಹೊನ್ನಾಳ್ಳಿ, ಶಿಮೊಗ್ಗಾ

**ಪ್ರಕಟಣೆ:** JESI Vo|XX /PP.79-80

**ಭಾಷೆ:** ಪರ್ಶಿಯನ್

**ಅರಸ:** ಸಿಕಂದರ್ ಆದಿಲ್‌ಷಾಹ

**ಬರಹಗಾರ:** ?

**ಶಾಸನ ವರ್ಷ:** ಕ್ರಿ.ಶ. 1673 ಜನವರಿ 9 ರಿಂದ ಏಪ್ರಿಲ್ 17.

ಈ ಪರ್ಶಿಯನ್ ಭಾಷೆಯ ಶಾಸನವು 11 ಸಾಲಿನಲ್ಲಿ ರಚಿಸಲ್ಪಟ್ಟಿದೆ. ಈ ಬಿಡಿ ಶಾಸನ ಶಿಲೆಯು ಹೊನ್ನಾಳಿಯ ಜಾಮಿಯ ಮಸೀದೆಯಲ್ಲಿದೆ. ಇದರಲ್ಲಿ ಹೊನ್ನಾಳ್ಳಿಯನ್ನು ದಿಯಾನತ್‌ರಾವ್‌ಗೆ ಉಂಬಳಿಯಾಗಿ ಸಿಕಂದರ್ ಷಾಃನು ಕೊಟ್ಟುದಾಗಿಯೂ ಮತ್ತು ಅಲ್ಲಿ ಗೋವಿಂದರಾವ್ ಎಂಬುವನು ಬುರ್ಜನ್ನು ಕಟ್ಟಿಸಿದುದಾಗಿಯೂ ಬರೆದಿದೆ. ಬುರ್ಜ್‌ನ್ನು ಗೋವಿಂದರಾವ್ ದಿಯಾನತ್ ಬುರ್ಜ್ ಎಂದು ನಾಮಕರಣ ಮಾಡಿದುದಾಗಿಯೂ ತಿಳಿಸಿದೆ. ಬುರ್ಜ್‌ನ ನಿರ್ಮಾಣಕಾರ್ಯವನ್ನು ಷುಹುರ್ ಸಂವತ್ಸರ 1073, ರಮ್ಜಾನ್ 30 ರಂದು ಆರಂಭಿಸಿ ಮುಹರ್‍ರಂ 10 ರಂದು ಮುಗಿಸಲಾಯಿತೆಂದೂ (ಕ್ರಿ.ಶ.1673 ಜನವರಿ 9 ರಿಂದ ಏಪ್ರಿಲ್ 17) ಇದರಲ್ಲಿ ತಿಳಿಸಿದೆ.[10] ಸಿಕಂದರ್ ಆದಿಲ್‌ಶಾಹನು ಬಿಜಾಪುರ ದಿಂದ ಮಲೆನಾಡಿನ ಶಿಮೊಗ್ಗಾದವರೆಗೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ್ದನು. ಹಾಗೂ ಅಲ್ಲಿಯು ಸಹ ಯಾವ ರೀತಿ ಧರ್ಮ–ಸಮನ್ವಯತೆಯನ್ನು ತನ್ನ ಆಡಳಿತದಲ್ಲಿ ನೋಡಿದ ಎಂಬುವುದನ್ನು ಈ ಶಾಸನದಲ್ಲಿ ನೋಡಬಹುದಾಗಿದೆ.

**ಸಮಾರೋಪ:**

ಕರ್ನಾಟಕ ರಾಜ್ಯವು ಧರ್ಮಗಳ ಸಮನ್ವಯತೆಯನ್ನು ಸಾಧಿಸಿದಂತಹ ರಾಜ್ಯವಾಗಿದೆ. ಕರ್ನಾಟಕವು ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಸಂಪದ್ಭರಿತ ರಾಜ್ಯವಾಗಿದೆ. ಭಾರತ ದೇಶದಲ್ಲಿಯೇ ಕರ್ನಾಟಕದಲ್ಲಿ ಅತ್ಯಂತ ಪುರಾತನ ಕಾಲದಿಂದಲೂ ಕಂಡು ಬರುವ ಶಾಸನಗಳನ್ನು ಕಾಣಬಹುದು. ಮಧ್ಯಕಾಲದಲ್ಲಿ ಬಿಜಾಪುರದಲ್ಲಿ ಆಡಳಿತಕ್ಕೆ ಬಂದಿದ್ದ ಆದಿಲ್‌ಷಾಹಿ ಸಾಮ್ರಾಜ್ಯವು ಸಹ ತನ್ನ ಆಸ್ಥಾನದಲ್ಲಿ ಅನೇಕ ಹಿಂದೂ–ಮುಸ್ಲಿಂ ಸೇವಕರನ್ನು ನೇಮಿಸಿಕೊಂಡಿದ್ದು, ಯಾವುದೇ ಭೇದವಿಲ್ಲದೆ, ಮುಸ್ಲಿಂರಂತೆ ಹಿಂದೂಗಳಿಗೂ ಉನ್ನತ ಹುದ್ದೆಯನ್ನು ನೀಡಿ, ಮುಸ್ಲಿಂ ಸೇವಕರು ತಾವು ಕೈಗೊಂಡ ಆಸ್ಥಾನದ ಕಾರ್ಯವನ್ನು ಅರಸನ ಹೆಸರ ಜೊತೆ ತಮ್ಮ ಹೆಸರಿನ ಸಮೇತ ಶಾಸನದ ಮೇಲೆ ಬರೆಸಿಕೊಳ್ಳುವಂತೆ, ಹಿಂದೂಗಳಿಗೂ ಈ ಅವಕಾಶ ಕಲ್ಪಿಸಿಕೊಟ್ಟಿರುವುದರಿಂದ ಆದಿಲ್‌ಶಾಹಿ ಸಾಮ್ರಾಜ್ಯದಲ್ಲಿ ಒಂದು ರೀತಿಯ ಉತ್ತಮವಾದ ಹಿಂದೂ–ಮುಸ್ಲಿಂರ ಭಾವೈಕ್ಯತೆ ಇತ್ತು ಎಂದು ತಿಳಿದುಕೊಳ್ಳಲು ಈ ಶಾಸನಗಳು ಇಂದು ನಮಗೆ ಮೂಕ ಸಾಕ್ಷಿಗಳಾಗಿ ದೊರಕುತ್ತವೆ. ಇಲ್ಲಿ ಮೇಲೆ ಉಲ್ಲೇಖಿತವಾದ ಶಾಸನಗಳು ಅಷ್ಟೆ

ಅಲ್ಲದೇ ಇನ್ನೂ ಅನೇಕ ಶಾಸನಗಳು, ಆದಿಲ್‌ಷಾಹಿ ಸಾಮ್ರಾಜ್ಯದ ಧಾರ್ಮಿಕ ಸಮನ್ವಯತೆಯನ್ನು ಪ್ರತಿಬಿಂಬಿಸುವಂತಹ ದಾಖಲೆ ಮತ್ತು ಪುರಾವೆಗಳಾಗಿವೆ. ಇಂದು ಅವು ನಮಗೆ ಸಾಮ್ರಾಜ್ಯದ ಚರಿತ್ರೆಯ ಜೊತೆಗೆ ಕರ್ನಾಟಕದ ಧಾರ್ಮಿಕ ಸಮನ್ವಯತೆಯನ್ನು ಅಭ್ಯಸಿಸಲು ನೆರವಾಗಿವೆ.

**ಪರಾಮರ್ಶನ ಗ್ರಂಥಗಳು:**


1. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಆದಿಲ್‌ಷಾಹಿ ಸಂಪುಟ–18, ಪುಟ ಸಂಖ್ಯೆ–ix.
3. ಆದಿಲ್‌ಷಾಹಿ ಸಂಪುಟ–18, ಪುಟ ಸಂಖ್ಯೆ–xiii.
4. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–76, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–78, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–85, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–88, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–109–110, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–129, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
10. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–266–267, ಎಂ. ಯಾಸೀನ್ ಖುದ್ದುಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.